ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 17 ನೇ ಮಾರ್ಚ್, 2020

ತೋಟಗಾರಿಕೆ ಫಾರಂಗಳ ಬಗ್ಗೆ

ಶ್ರೀ ಕಾಂತರಾಜ್ (ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

1051 (1160) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಒಟ್ಟು ತೋಟಗಾರಿಕೆ ಫಾರಂಗಳೆಷ್ಟು ; ಹಾಗೂ ಎಷ್ಟು ಎಕರೆ ಪ್ರದೇಶದಲ್ಲಿದೆ ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) 2016-17, 2017-18, 2018-19 ಮತ್ತು 2019-20ನೇ ಸಾಲಿನಲ್ಲಿ ಈ ಫಾರಂಗಳ ನಿರ್ವಹಣೆ ಮಾಡಲು ಎಷ್ಟು ಅನುದಾನವನ್ನು ನೀಡಿದೆ ; ಇದರಲ್ಲಿ ಖರ್ಚು ಮಾಡಿರುವ ಹಣವೆಷ್ಟು; (ವಿವರ ನೀಡುವುದು)

(ಇ) ಈ ತೋಟಗಾರಿಕೆ ಫಾರಂಗಳಿಂದ ಕಳೆದ 4 ವರ್ಷಗಳಲ್ಲಿ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು ; (ವಿವರ ನೀಡುವುದು)

(ಈ) ತುಮಕೂರು ಜಿಲ್ಲೆಯಲ್ಲಿರುವ ತೋಟಗಾರಿಕೆ ಫಾರಂಗಳೆಷ್ಟು ; ಹಾಗೂ ಎಷ್ಟು ಎಕರೆ ಪ್ರದೇಶಗಳಲ್ಲಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಉ) ಕಳೆದ 4 ವರ್ಷದಲ್ಲಿ ಜಿಲ್ಲೆಯಲ್ಲಿರುವ ಫಾರಂಗಳನ್ನು ನಿರ್ವಹಣೆ ಮಾಡಲು ಎಷ್ಟು ಹಣ ಖರ್ಚು ಮಾಡಲಾಗಿದೆ ; ಮತ್ತು ಈ ಫಾರಂಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ;

(ಊ) 2020-21ನೇ ಆಯವ್ಯಯದಲ್ಲಿ ತೋಟಗಾರಿಕೆ ಇಲಾಖೆಗೆ ಮತ್ತು ತೋಟಗಾರಿಕೆ ಫಾರಂಗಳನ್ನು ನಿರ್ವಹಣೆ ಮಾಡಲು ಒದಗಿಸಿರುವ ಅನುದಾನವೆಷ್ಟು ; (ಮಾಹಿತಿ ನೀಡುವುದು)

(ಋ) ಈ ತೋಟಗಾರಿಕೆ ಫಾರಂಗಳ ಭೂಮಿಯು ಒತ್ತುವರಿ/ಪರಭಾರೆಯಾಗುತ್ತಿರುವುದರಿಂದ ಇಸ್ರೇಲ್ ಮಾದರಿಯ ತೋಟಗಾರಿಕೆ/ಕೃಷಿಗೆ ಈ ಜಮೀನನ್ನು ಬಳಸಿಕೊಳ್ಳಲು ಮತ್ತು ಸರ್ಕಾರದ ವಿವಿಧ ಯೋಜನೆಗಳಿಗೆ ಬಳಸಿಕೊಳ್ಳಲು ಸರ್ಕಾರ ಯೋಚಿಸಿ ನಿರ್ಧಾರ ತೆಗೆದುಕೊಳ್ಳುವುದೇ ?